6. ಗಮನ ಸೆಳೆಯುವ ಸೂಚನೆಗಳು

ವಿಷಯ (ಅ) ಮಂಡ್ಯ ಜಿಲ್ಲೆಯ ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :- ಮಾನ್ಯ ಉಪಾಧ್ಯಕ್ಷರೆ, ಮಂಡ್ಯ ಜಿಲ್ಲೆಯ ವಿಶ್ವೇಶ್ವರಯ್ಯ ನಾಲೆಯನ್ನು ಆಧುನೀಕರಣಗೊಳಿಸುವ ಬಗ್ಗೆ ನಾನು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಕೃಷ್ಣರಾಜಸಾಗರದ ವಿಶ್ವೇಶ್ವರಯ್ಯ ನಾಲೆಯಲ್ಲಿನ ತುದಿ ಹಂತದಲ್ಲಿ ನೀರು ಇಲ್ಲದೇ ಬವಣೆ ಪಡುತ್ತಿರುವ ಆಚ್ಚುಕಟ್ಟಿಗೆ ನೀರು ಒದಗಿಸುವ ಸಲುವಾಗಿ ವಿಶ್ವೇಶ್ವರಯ್ಯ ನಾಲೆಯಲ್ಲಿ ಈಗ ಹರಿಯುತ್ತಿರುವ 2200 ಕ್ಯೂಸೆಕ್ಸ್ ನೀರನ್ನು 3050 ಕ್ಯೂಸೆಕ್ಸ್ ನೀರಿಗೆ ಹೆಚ್ಚುವರಿ ಮಾಡಲು ವಿಶ್ವೇಶ್ವರಯ್ಯ ನಾಲೆಯನ್ನು ಆಧುನೀಕರಣ ಮಾಡುವ ಉದ್ದೇಶವಾಗಿದೆ. ಇದರಿಂದ ಸಂಪರ್ಕ ನಾಲೆಯಲ್ಲಿ 800 ಕ್ಯೂಸೆಕ್ಸ್ ನೀರನ್ನು ಹರಿಸಿ, ಕಾವೇರಿ ಉಪ ನಾಲೆಯನ್ನು 24 ನೇ ಕಿ.ಮೀ.ನಲ್ಲಿ ಸೇರಿಸಲಾಗುವುದು ಹಾಗೂ ಸಂಪರ್ಕ ನಾಲೆಯು 27 ನೇ ಕಿ.ಮೀ. ಉದ್ದ ಇದ್ದು ಆದರಡಿಯಲ್ಲಿ 17 ಮತ್ತು 18 ನೇ ಕಿ.ಮೀ.ನಲ್ಲಿ 1300 ಮೀಟರ್ ಉದ್ದದ ಸುರಂಗವು ಕೂಡ ಒಳಗೊಂಡಿರುತ್ತದೆ.

ಇತ್ತೀಚಿನ ಆಧುನೀಕರಣ ಪರಿಷ್ಕೃತ ಅಂದಾಜು ರೂ. 170-00 ಕೋಟಿಗಳಾಗಿದ್ದು ಮಾರ್ಚ್ 1996 ರ ಅಂತ್ಯದವರೆಗೆ ರೂ. 79-44 ಕೋಟಿಗಳು ವೆಚ್ಚವಾಗಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಆಧುನೀಕರಣ ಕಾರ್ಯಗಳಿಗೆ ರೂ. 32-00 ಕೋಟಿ ಅನುದಾನ ನೀಡಲಾಗಿದೆ. ಈ ಸಾಲಿನಲ್ಲಿ ವಿಶ್ವೇಶ್ವರಯ್ಯ ನಾಲೆಯಲ್ಲಿ 0-37 ಕಿ. ಮೀ. ಹಾಗೂ ಸಂಪರ್ಕ ನಾಲೆಯ ಭಾರೀ ಕಾಮಗಾರಿಗಳನ್ನು ಮಾರ್ಚ್ 1997 ರ ಅಂತ್ಯಕ್ಕೆ ಮುಗಿಸಲು ಯೋಜಿಸಲಾಗಿದೆ.

ಆಧುನೀಕರಣ ಯೋಜನೆಗೆ ಈ ಸಾಲಿನಲ್ಲಿ ಆಯವ್ಯಯದಲ್ಲಿ ಮೀಸಲಿಟ್ಟಿರುವ ರೂ. 32-00 ಕೋಟಿಗಳ ಅನುದಾನಕ್ಕೆ ಅನುಗುಣವಾಗಿ 1996-97 ನೇ ಸಾಲಿಗೆ ವಿವರ ವಾದ ಕಾರ್ಯಕ್ರಮ ಯೋಜನೆಯನ್ನು ಯೋಜಿಸಲಾಗಿದೆ.

ವಿಶ್ವೇಶ್ವರಯ್ಯ ನಾಲೆಯಲ್ಲಿ 0-37 ಕಿ. ಮೀ.ನಲ್ಲಿ ಬರುವಂತಹ ಸಂಯೋಜಿತ ಗರ್ಡರ್ ಸೇತುವೆಗಳ ಹಾಗೂ 8 ತುದಿ ಸಂಪರ್ಕ ಜೋಡಣೆ ಕೆಲಸಗಳನ್ನು ಕೂಡ ಕೈಗೆತ್ತಿಕೊಂಡು ಪೂರ್ಣಗೊಳಿಸಲು ಯೋಜಿಸಲಾಗಿದೆ.

ಜೂನ್ 1995 ರಲ್ಲಿ ಕೃಷ್ಣರಾಜ ಸಾಗರದ ಆಚ್ಚುಕಟ್ಟು ಪ್ರದೇಶದ ಶಾಸಕರು ಹಾಗೂ ಇತರ ಪ್ರಮುಖರು ಕೈಗೊಂಡ ತೀರ್ಮಾನದಂತೆ ಜೂನ್ 1995 ಮತ್ತು ಜೂನ್ 1996 ರಲ್ಲಿ ಕೃಷ್ಣರಾಜಸಾಗರದ ಆಧುನೀಕರಣ ಕಾಮಗಾರಿಗಳನ್ನು ಕೈಗೊಂಡಲ್ಲಿ ಪ್ರಸ್ತುತ ಬೆಳೆದು ನಿಂತಿರುವ ಬೆಳೆಗಳಿಗೆ ಸಾಕಷ್ಟು ಹಾನಿ ಉಂಟಾಗುವುದೆಂದು, ಜನವರಿ 1997 ರಲ್ಲಿ ಕಾಲುವೆಯಲ್ಲಿ ನೀರು ನಿಲ್ಲಿಸಿ ಉಳಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸಬಹುದೆಂದು

ನಿರ್ಧರಿಸಲಾಯಿತು. ಇದರ ಬಗ್ಗೆ ಕೃಷ್ಣರಾಜಸಾಗರ ನೀರಾವರಿ ಸಲಹಾ ಸಮಿತಿಯಲ್ಲೂ ಜನವರಿ 1997 ರಲ್ಲಿ ಕಾಲುವೆಯಲ್ಲಿ ನೀರು ನಿಲ್ಲಿಸುವ ಬಗ್ಗೆ ತೀರ್ಮಾನಿಸಲಾಗಿದೆ.

ಮೇಲೆ ತಿಳಿಸಿರುವ 8 ತುದಿ ಸಂಪರ್ಕ ಜೋಡಣೆ ಕೆಲಸವನ್ನು ನಿರ್ವಹಿಸಲು 1997 ರ ಜನವರಿ 20 ನೇ ತಾರೀಖಿನಿಂದ ಏಪ್ರಿಲ್ 20 ರ ತನಕ ನಾಲೆಯನ್ನು ಬಂದ್ ಮಾಡಲು ಉದ್ದೇಶಿಸಲಾಗಿದೆ. ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣದ ಬಗ್ಗೆ ಮಂಡ್ಯ ಜಿಲ್ಲೆಯ ಸಂಬಂಧಪಟ್ಟ ಎಲ್ಲರ ಸಹಕಾರದಿಂದ ಆಧುನೀಕರಣ ಯೋಜನೆಯನ್ನು ಯೋಚಿಸಿರುವಂತೆ ಪೂರ್ಣಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

+ **ಶ್ರೀ ಕೆ. ಎಸ್. ಪುಟ್ಟಣ್ಣಯ್ಯ** :- ಮಾನ್ಯ ಉಪಾಧ್ಯಕ್ಷರೇ, ಈ ವಿಷಯವಾಗಿ ಐ.ಸಿ.ಸಿ. ಸಭೆಯಲ್ಲಿ ಮಾತುಕತೆಯಾಗಿ ತೀರ್ಮಾನವಾಗಿರುವುದು ನಿಜ. ಅಲ್ಲಿ ಏನಾಗಿದೆಯೆಂದರೆ, ಅಲ್ಲಿನ ಸುಮಾರು ಎರಡು ಲಕ್ಷ ಎಕರೆಗಳಷ್ಟು ಪ್ರದೇಶಕ್ಕೆ ನೀರು ಸರಿಯಾಗಿ ಸರಬರಾಜಾಗದಿರುವುದು. 1979-80 ನೇ ಇಸವಿಯಲ್ಲಿ ಮುಗ್ದಂ ಎಂಬುವವರ ಅಧ್ಯಕ್ಷತೆಯಲ್ಲಿ ನಿವೃತ್ತ ಇಂಜಿನಿಯರುಗಳು ಮತ್ತು ರಾಜಕಾರಣಿಗಳೆಲ್ಲರೂ ಸೇರಿ ಒಂದು ಸಮಿತಿ ರಚಿಸಿದರು. ಆದರೆ, ಸಮಿತಿಯ ಕಾರ್ಯ ಮುಕ್ತಾಯದ ಹಂತಕ್ಕೆ ಬಂದಿದ್ದಾಗ ರೈತರು ಏನು ಮಾಡಿದ್ದಾರೆಂದರೆ ದೂರದರ್ಶನ ಮೂಲಕ ಮತ್ತು ಕರಪತ್ರಗಳನ್ನು ಹಂಚುವ ಮೂಲಕ ಪ್ರಚಾರ ಮಾಡಿದರು. ಎಲ್ಲಾ ಕಡೆ ಬಿತ್ತನೆ ಕಾರ್ಯ ನಡೆಯುತ್ತಿದ್ದು, ಗೊಂದಲ ಸೃಷ್ಟಿಯಾಗಿದೆ. ಆದುದರಿಂದ, ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣದ ಬಗ್ಗೆ ಬಹಳ ಜವಾಬ್ದಾರಿಯುತವಾಗಿ ಸಾರ್ವಜನಿಕವಾಗಿ ಪೂರ್ಣ ಪ್ರಮಾಣದಲ್ಲಿ ಗಮನ ಸೆಳೆಯುವ ಕೆಲಸ ಮಾಡಬೇಕಾಗಿತ್ತು. ಎಂಟು ಕನೆಕ್ಷನ್ ಮತ್ತು ಒಂದು ರೆಗ್ಯುಲೇಟರ್ ಬಗ್ಗೆ ನಾನು ಆದಕ್ಕೆ ಸಂಬಂಧಿಸಿದಂತೆ ಕೆಲವು ಮಾಹಿತಿಗಳನ್ನು ಪಡೆದಿದ್ದೇನೆ. ಮಾನ್ಯ ನಾಗೇಗೌಡರು ಈ ವಾರ ಅಲ್ಲಿಗೆ ಭೇಟಿ ಕೊಡುವ ಕಾರ್ಯಕ್ರಮ ಇಟ್ಟುಕೊಂಡಿರುವುದು ನಿಜವೇ? ಜನ ಪ್ರತಿನಿಧಿಗಳಾದಿಯಾಗಿ ಸಂಘ-ಸಂಸ್ಥೆಗಳು, ಎಲ್ಲರೂ ಒಟ್ಟಾಗಿ ಸೇರಿ ಕೊನೆಯವರಿಗೆ ನೀರು ಬಿಡಬಾರದೆಂದಲ್ಲ, ಕೊನೆಯವರೆಗೆ ನೀರು ತಲುಪಲೇಬೇಕೆಂದು ಹೇಳುವವರಲ್ಲಿ ನಾವೂ ಸಹ ಮೊದಲಿನವರೇ. ಉದಾಹರಣೆಯಾಗಿ, ನಾನು ಕೆಲವು ಹೆಸರುಗಳನ್ನು ಉಲ್ಲೇಖಿಸುತ್ತೇನೆ. ಅದರ ಬಗ್ಗೆ ಸರ್ಕಾರ ಸಮಾಲೋಚಿಸಬೇಕು. ಅವರುಗಳು ಯಾರೆಂದರೆ ಶ್ರೀಯುತರುಗಳಾದ ಕೆ.ಸಿ. ರೆಡ್ಡಿ, ರಾಮಚಂದ್ರಯ್ಯ, ಹೆಚ್. ಸಿ. ಭಟ್ ಮತ್ತು ಬಾಲಾಜಿ ಪ್ರಸಾದ್. ಬಾಲಾಜಿ ಪ್ರಸಾದ್ ಎಂಬುವವರು ಡಬ್ಲ್ಯು.ಬಿ.ಸಿ.ನಲ್ಲಿ ವರ್ಲ್ಡ್ ಬ್ಯಾಂಕ್ ಕನ್ಸ್ಲೆಂಟೆಂಟ್ಸ್ ಮತ್ತು ರೆಗ್ಯುಲೇಟರ್‌ನಲ್ಲಿ ಎಕ್ಸ್‌ಪರ್ಟ್ ಆಗಿದ್ದಾರೆ. ಈ ನಾಲ್ಕು ಜನರನ್ನೊಳಗೊಂಡ ಒಂದು ತಂಡದ ಜೊತೆಗೆ ಎಲ್ ಇಂಡ್ ಟಿ ಅವರನ್ನೂ ಕನ್ಸ್ಲೆಂಟೇಷನ್ ಮಾಡಿ ಕರೆದುಕೊಂಡು ಹೋಗಿ. ವಿಶ್ವೇಶ್ವರಯ್ಯ ನಾಲೆಯನ್ನು ಆಧುನೀಕರಣಗೊಳಿಸಲು ಮೂರು ತಿಂಗಳ ಕಾಲಾವಧಿ ಬೇಕೇ? ಇಲ್ಲವೇ ಒಂದೇ ತಿಂಗಳಲ್ಲಿ ಶೇಕಡ ಐವತ್ತರಷ್ಟು ಭಾಗದ ಕೆಲಸವನ್ನು ಇನ್ನೊಂದು ತಿಂಗಳಲ್ಲಿ ಉಳಿಕೆ ಭಾಗದ ಕೆಲಸವನ್ನು ಅಂದರೆ, ಒಂದು ತಿಂಗಳ ಕಾಲ ಕಾಮಗಾರಿ ನಿಲ್ಲಿಸಿ ಆ ಅವಧಿಯಲ್ಲಿ ನೀರು ಕೊಟ್ಟು ಇನ್ನೊಂದು ತಿಂಗಳಲ್ಲಿ ಆಧುನೀಕರಣದ ಕಾಮಗಾರಿ ಮಾಡುವ ಆಲೋಚನೆ ಮಾಡಿ, ಇದರಿಂದ ರೈತರು ತಾವು ಬೆಳೆದಂಥ ಬೆಳೆಯನ್ನು ಉಳಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಏಕೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಮಂಡ್ಯ ಜಿಲ್ಲೆ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಕಬ್ಬು ಬೆಳೆಯುವ ಪ್ರದೇಶವಾಗಿದೆ.

03-50 ಪಿ. ಎಂ.

ಹೋದ ಸಾರಿ ಮಂಡ್ಯದಲ್ಲಿ ರೈತರು ಕಬ್ಬನ್ನೂ ಹಾಕಿ ಐವತ್ತು ಭಾಗ ನಾಶ ವಾಗಿಹೋದರು. ಈ ಸಾರಿ ಸಹ ಬಹಳ ಕಷ್ಟವಾದ ಪರಿಸ್ಥಿತಿ ಇದೆ. ನೀರಾವರಿ ಸಚಿವರಾದ ಮಾನ್ಯ ನಾಗೇಗೌಡರು ಇಂಜಿನಿಯರಿಂಗ್ ಮಾಡಿದ್ದು ಆ ಹುದ್ದೆಯಲ್ಲಿ ಹೆಚ್ಚು ಪರಿಣತಿಯನ್ನು ಹೊಂದಿರುವುದರಿಂದ ಇದರ ಬಗ್ಗೆ ಪುನರ್ಪರಿಶೀಲನೆ ಮಾಡಿ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸೂಕ್ತಾವಾದ ಕೆಲಸವನ್ನು ಮಾಡಬೇಕೆಂದು ಅದರ ಗಮನ ವನ್ನು ಸೆಳೆಯುತ್ತೇನೆ. ಇದರ ಬಗ್ಗೆ ಮತ್ತೆ ಪರಿಶೀಲನೆ ಮಾಡಿ ಜನಪ್ರತಿನಿಧಿಗಳ ಸಭೆಯನ್ನು ಕರೆದು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು ಎಂದು ತಮ್ಮ ಮೂಲಕ ಮಾನ್ಯ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) :- ಉಪಾಧ್ಯಕ್ಷರೇ, ವಿಶ್ವೇಶ್ವರ ನಾಲೆಯ ಆಧುನೀಕರಣವಾಗಬೇಕೆಂದು ನಾವು ಬಹಳ ವರ್ಷಗಳಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇವೆ. ಹೋದ ವರ್ಷ ಮಂಡ್ಯ ಜಿಲ್ಲಾ ರೈತರ ಹಿತರಕ್ಷಣಾ ಸಮಿತಿಯವರು ಮತ್ತು ಎಲ್ಲಾ ರೈತರು ಕೇಳಿಕೊಂಡಮೇಲೆ ಅಂದು ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ದೇವೇಗೌಡರು ಇದನ್ನು ಆಧುನೀಕರಣ ಮಾಡಬೇಕೆಂದು ಹೇಳಿ ಮಂಜೂರಾತಿಯನ್ನೂ ನೀಡಿದ್ದಾರೆ.

ಉಪಾಧ್ಯಕ್ಷರು :- ತಾವು ಈ ವಿಷಯದ ಬಗ್ಗೆ ಮಾತನಾಡಲು ಸಹಿಯನ್ನು ಹಾಕಿಲ್ಲ, ತಾವು ಮಾತನಾಡುವಂತಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ :- ನಾನು ಆ ಭಾಗದ ರೈತ. ನನಗೆ ಮಾತನಾಡಲು ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) :- ಇದು ಆ ಭಾಗದ ರೈತರ ಆಗುಹೋಗಿನ ಪ್ರಶ್ನೆ. ಆದ್ದರಿಂದ ನಮಗೆ ಮಾತನಾಡಲು ಅವಕಾಶಮಾಡಿಕೊಡಬೇಕು. ತಪ್ಪೇನಾಗುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಕಳೆದ ಒಂದು ವರ್ಷದಿಂದ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಉಪಾಧ್ಯಕ್ಷರೇ, ತಾವು ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡುವುದಾದರೆ, ಅನಂತರ ನಮಗೂ ಮಾತನಾಡಲು ಅವಕಾಶಮಾಡಿ ಕೊಡಬೇಕು.

ಉಪಾಧ್ಯಕ್ಷರು :- ಮಾನ್ಯ ಶಿವರಾಮೇಗೌಡರೇ, ತಾವು ಮುಗಿಸಿಬಿಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಇಪ್ಪತ್ತನಾಲ್ಕು ಗಂಟೆ ಅವರೇ ಮಾತನಾಡುವುದಾದರೆ ನಾವೆಲ್ಲಿ ಹೋಗಬೇಕು? ಈ ಸದನದ ಪ್ರತಿಯೊಂದು ವಿಷಯದ ಬಗ್ಗೆ ಮಾತನಾಡಲು ತಾವು ಎದ್ದೇಳುತ್ತೀರಿ, ನಾವು ಯಾವುದಾದರೊಂದು ವಿಷಯದ ಬಗ್ಗೆ ಮಾತನಾಡಲು ಹೋದರೆ ಈ ರೀತಿ ಮಾಡುತ್ತೀರಿ. ಮಾನ್ಯ ಉಪಾಧ್ಯಕ್ಷರೇ, ತಾವು ಎರಡು ನಿಮಿಷ ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು :- ಎರಡು ನಿಮಿಷದಲ್ಲಿ ತಾವು ಮಾತನಾಡಿ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ :- ಉಪಾಧ್ಯಕ್ಷರೇ, ಅವರು ಮಾತನಾಡುವುದಕ್ಕೆ ನನ್ನದೇನೂ ತಕರಾರಿಲ್ಲ. ಗಮನ ಸೆಳೆಯುವ ಸೂಚನೆಗೆ ಸಹಿಯನ್ನು ಹಾಕದೇ ಇರುವವರು ಮಾತನಾಡಬಹುದು ಎನ್ನತಕ್ಕ ಸಂಪ್ರದಾಯವನ್ನು ಮಾಡಿ. ನಮಗೂ ಸಂತೋಷವಾಗುತ್ತದೆ. ನಾವೂ ಮಾತನಾಡಬಹುದು. ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣದ ಬಗ್ಗೆ ನಾವೆಲ್ಲರೂ ಮಾತನಾಡಬೇಕೆಂದಿದ್ದೇವೆ. ಅದಕ್ಕೆ ತಾವು ಅನುಕೂಲ ಮಾಡಿಕೊಡಿ. ಮಾನ್ಯ ಶಿವರಾಮೇಗೌಡರಿಗೆ ಬೇಕಾದರೆ ಇಪ್ಪತ್ತನಾಲ್ಕು ಗಂಟೆಗಳ ಕಾಲ ಮಾತನಾಡಲು ಅವಕಾಶವನ್ನು ಕೊಡಿ, ನನ್ನದೇನೂ ಅಭ್ಯಂತರವಿಲ್ಲ. ನನಗೂ ಮಾತನಾಡಲು ಅವಕಾಶಕೊಡಿ;

ಶ್ರೀ ಕೆ. ಎಶ್ವೇಶ್ವರ ಹೆಗಡೆ :- ಗಮನಸೆಳೆಯುವ ಸೂಚನೆಯಲ್ಲಿ ಬೇರೆಯವರೂ ಮಾತನಾಡಬಹುದೇ?

ಉಪಾಧ್ಯಕ್ಷರು :- ತಾವು ದಯಮಾಡಿ ಕುಳಿತುಕೊಳ್ಳಿ. ಕೆ. ಜಯರಾಮ್ ಶೆಟ್ಟಿಯವರು ಗಮನಸೆಳೆಯಬೇಕು.

(ಗೊಂದಲ)

ಶ್ರೀ ಎಸ್. ಆರ್. ಶಿವರಾಮೇಗೌಡ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ನಾಲೆಯ ಆಧುನೀಕರಣದ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತಾರೆ? ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ, ಯಾವಾಗ ನೀರನ್ನು ಬಿಡುತ್ತಾರೆ ಎಂಬ ಬಗ್ಗೆ ಸ್ಪಷ್ಟಪಡಿಸಬೇಕು.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಮಾನ್ಯ ಉಪಾಧ್ಯಕ್ಷರೇ, ಒಂದು ವಿಷಯವನ್ನು ಮರೆತಿದ್ದೆ, ಆದರ ಬಗ್ಗೆ ಸಚಿವರ ಗಮನವನ್ನು ಸೆಳೆದುಬಿಡುತ್ತೇನೆ. ಭದ್ರಾನಾಲೆಯಲ್ಲಿ ಇದೇ ರೀತಿ ನೀರು ಡ್ಯಾಂನಿಂದ ಹೊರಗೆ ಬರಲು ಪ್ರಾರಂಭವಾಯಿತು. ನೀರಾವರಿ ವಿಷಯದಲ್ಲಿ ಹತ್ತು ಜನರ ಅಭಿಪ್ರಾಯವನ್ನು ಕೇಳಿದರೆ ಅವರಿಗೆ ಅನುಕೂಲವಾಗುತ್ತದೆ ಎನ್ನತಕ್ಕ ದೃಷ್ಟಿಯಿಂದ ಈ ವಿಚಾರವನ್ನು ಸಚಿವರ ಗಮನಕ್ಕೆ ತರುತ್ತಿದ್ದೇನೆ.

+ **ಶ್ರೀ ಕೆ. ಎನ್. ನಾಗೇಗೌಡ** :- ಮಾನ್ಯ ಉಪಾಧ್ಯಕ್ಷರೇ, ನಾನು ಎರಡು ವಿಷಯಗಳನ್ನು ಸದನದಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಮಾನ್ಯ ದೇವೇಗೌಡರು ಇದೇ ವಿಧಾನಸೌಧದ ಕಾನ್‌ಫರೆನ್ಸ್ ಹಾಲ್‌ನಲ್ಲಿ 1995-96 ರಲ್ಲಿ ನೀರನ್ನು ನಿಲ್ಲಿಸಿದರೆ ಬೆಳೆಗಳಿಗೆ ಹಾನಿಯಾಗುತ್ತದೆ. ಆದ್ದರಿಂದ 1997 ನೇ ಜನವರಿಯಲ್ಲಿ ನೀರನ್ನು ನಿಲ್ಲಿಸಬೇಕೆಂದು

ತೀರ್ಮಾನ ಮಾಡಿದ್ದು ಅವರಿಗೂ ಗೊತ್ತಿದೆ. ಕಳೆದ ಇಪ್ಪತ್ತು ದಿವಸಗಳ ಹಿಂದೆ ಶ್ರೀ ಎಸ್. ಡಿ. ಜಯರಾಮ್‌ರವರ ಅಧ್ಯಕ್ಷತೆಯಲ್ಲಿ ಕೃಷ್ಣರಾಜ ಸಾಗರ ಸಲಹಾ ಸಮಿತಿಯ ಸಭೆ ಸೇರಿ ನೀರನ್ನು ನಿಲ್ಲಿಸಬೇಕೆಂದು ತೀರ್ಮಾನ ಮಾಡಿರುವುದು ಅವರಿಗೆ ಗೊತ್ತಿದೆ. ಕೆ. ಸಿ. ರೆಡ್ಡಿಯವರನ್ನು ಈ ತಿಂಗಳ 28 ರಂದು ನಾಲೆಯ ಯಾವ್ಯಾವ ಕೆಲಸ ಎಷ್ಟಾಗಿದೆಯೆಂಬದನ್ನು ಪರಿಶೀಲನೆ ಮಾಡಿಕೊಂಡು ಬರಲು ಕಳಿಸುತ್ತಿದ್ದೇನೆ. ನಾನು ಈಗಾಗಲೇ ನಾಲ್ಕೈದು ಸಭೆಗಳನ್ನು ಇದಕ್ಕೆ ಸಂಬಂಧಪಟ್ಟಂತೆ ಮಾಡಿದ್ದೇನೆ. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದಂತೆ ಶ್ರೀ ಭಟ್, ಶ್ರೀ ಬಾಲಾಜಿ ರಾವ್, ಲಕ್ಷ್ಮೀನಾರಾಯಣ್ ರವರನ್ನು ಕರೆಸಿ ಖಂಡಿತಾ ಸಲಹೆಯನ್ನು ಕೇಳುವುದಾಗಿ ಭರವಸೆ ನೀಡುತ್ತೇನೆ. 1997 ನೇ ಜನವರಿಯಲ್ಲಿ ನೀರನ್ನು ನಿಲ್ಲಿಸಲೇಬೇಕಾಗುತ್ತದೆ. ನಾಲೆಯ ಕೆಲಸ ಮಾಡಬೇಕಾದರೆ ಬೇರೆ ಮಾರ್ಗವೇ ಇಲ್ಲ ಎಲ್ ಆಂಡ್ ಟಿ ಅವರ ತಾಂತ್ರಿಕ ಸಲಹೆಯನ್ನು ಕೇಳಬೇಕೆಂದು ಹೇಳಿದ್ದಾರೆ. ಬೇಕಾದರೆ ಇನ್ನೊಮ್ಮೆ ಅವರಿಂದ ಸಲಹೆಯನ್ನು ಕೇಳುತ್ತೇವೆ. ರೈತರಿಗೆ ಹಾನಿಯನ್ನು ಮಾಡಬೇಕೆಂದು ಸರ್ಕಾರಕ್ಕಾಗಲಿ, ಬೇರೆಯವರಿಗಾಗಲೀ, ನಮಗಾಗಲಿ ಉದ್ದೇಶವಿಲ್ಲ. ನಲವತ್ತು ವರ್ಷದ ನಾಲೆ ಅದು ಒಡೆದು ಹೋಗಿದೆ. ಕೆಳಭಾಗದಲ್ಲಿರತಕ್ಕ ಜನರು ನೀರಿಲ್ಲದೆ ತೊಂದರೆಪಡುತ್ತಿದ್ದಾರೆ. ಅದಕ್ಕಾಗಿಯೇ ವರುಣಾನಾಲೆಯ ಬಗ್ಗೆ ಚಳುವಳಿಯಾದದ್ದು. ಆ ಸಂದರ್ಭದಲ್ಲಿ ಶ್ರೀಮಾನ್ ದೇವರಾಜ್ ಅರಸುರವರು ಮಾಡಿದಂಥ ಸಹಾಯದಿಂದ ಎಂಟುನೂರು ಕ್ಯೂಸೆಕ್ಸ್ ನೀರು ನಮಗೆ ಲಭ್ಯವಾಗುತ್ತಿದೆ. ಆ ನೀರನ್ನು 1979 ನೇ ಇಸವಿಯಿಂದ ಇಲ್ಲಿಯವರೆಗೂ ಉಪಯೋಗ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಸುಮಾರು ಇಪ್ಪತ್ತು ವರ್ಷಗಳಿಂದ ಅಷ್ಟು ನೀರನ್ನು ನಾವು ಉಪಯೋಗ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಅದೇನು ಅಷ್ಟು ವರ್ಷದಿಂದ ಪೆಂಡಿಂಗ್ ಇದೆ ಅದನ್ನು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಪುಟ್ಟಣ್ಣಯ್ಯನವರು ಕೇವಲ ಒಂದು ತಿಂಗಳ ಕಾಲ ನಾಲೆಯಲ್ಲಿ ನೀರನ್ನು ನಿಲ್ಲಿಸಲು ಆಗುತ್ತದೆಯೇ ಎಂದು ತಿಳುವಳಿಕೆಯುಳ್ಳ ಸಲಹೆಯನ್ನು ಕೊಟ್ಟಿದ್ದಾರೆ. ಮೂರು ಜನ ತಾಂತ್ರಿಕ ತಜ್ಞರುಗಳಾದ ಭಟ್, ಬಾಲಾಜಿ ರಾವ್, ಲಕ್ಷ್ಮೀನಾರಾಯಣ್ ಎಂಬುವವರ ಸಲಹೆಯನ್ನು ಕೇಳಿ ಎಂದು ಹೇಳಿದ್ದಾರೆ. ಮೊನ್ನೆಯೂ ಸಹ ನನ್ನ ಚೆಂಬರ್‌ನಲ್ಲಿ ಮಾನ್ಯ ಚೌಡಯ್ಯನವರು, ಸಂಬಂಧಪಟ್ಟ ಶಾಸಕರು ಮತ್ತು ಕೆ. ಸಿ. ರೆಡ್ಡಿಯವರ ಜೊತೆ ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ಎಲ್ಲರೂ ನೀರನ್ನು ನಿಲ್ಲಿಸಲೇ ಬೇಕಾಗುತ್ತದೆ. ಎಂದು ಹೇಳಿದ್ದಾರೆ. ರೈತರಿಗೆ ಗೊಂದಲವಿಲ್ಲ. ಎರಡು ವರ್ಷದಿಂದ ಈ ಕೆಲಸವನ್ನು ಮುಂದೂಡಿಕೊಂಡು ಬಂದಿದ್ದೇವೆ, ಈ ವರ್ಷ ಮುಂದೂಡಲು ಆಗುವುದಿಲ್ಲ, ದಯವಿಟ್ಟು ಪುಟ್ಟಣ್ಣಯನವರು ಸಹಕಾರ ಮಾಡಬೇಕು. ನಲವತ್ತು ವರ್ಷಗಳ ದೇವರಾಜ್ ಅರಸ್‌ರವರ ಕನಸಾಗಿರುವ ಇದನ್ನು ಮಾಡಲೇಬೇಕು. ನಾಲೆಯಲ್ಲಿ ನೀರಿದ್ದರೂ ಸುಮ್ಮನೆ ಹರಿದುಹೋಗುತ್ತದೆ. ಆ ಎಂಟುನೂರು ಕ್ಯೂಸೆಕ್ಸ್ ನೀರನ್ನು ಉಪಯೋಗಿಸಿಕೊಳ್ಳಲೇಬೇಕು. ನೀರನ್ನು ನಿಲ್ಲಿಸುವ ಬಗ್ಗೆ ರೈತರಿಗೆ ಈಗಾಗಲೇ ತಿಳುವಳಿಕೆಯನ್ನು ಕೊಟ್ಟಿದ್ದೇವೆ. ನಮ್ಮ ಕಾರ್ಯಪಾಲಕ ಅಭಿಯಂತರುಗಳು, ಅಧೀಕ್ಷಕ ಅಭಿಯಂತರುಗಳು, ನಾವು ಹೋದ ಕಡೆಯಲ್ಲೆಲ್ಲಾ, ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ದೇವೇಗೌಡರು, ಎಲ್ಲಾ ಸಭೆಗಳಲ್ಲೂ ಇದರ ಬಗ್ಗೆ ಹೇಳಿದ್ದೇವೆ. ಪುಟ್ಟಣ್ಣನವರೂ ಸಭೆಗೆ ಬಂದಿದ್ದರು. ಅವರುಗಳು ಕೇವಲ ಒಂದು ತಿಂಗಳ ನೀರನ್ನು ನಿಲ್ಲಿಸಲು ಆಗುವುದಿಲ್ಲವೆ ಎಂದು ಕೇಳಿದ್ದಾರೆ. ನೀರನ್ನು ನಿಲ್ಲಿಸುವುದರಿಂದ ಸುಮಾರು ಆರು ನೂರು ಕೋಟಿ ರೂಪಾಯಿಗಳ

ಬೆಳೆ ನಾಶವಾಗುತ್ತದೆ ಆದರೆ ನಲವತ್ತು ವರ್ಷಗಳಿಂದ ಮಾಡಬೇಕಾಗಿರುವ ಕೆಲಸವನ್ನು ಮಾಡಲೇ ಬೇಕಾಗುತ್ತದೆ. ಮುಂದಿನ ಪೀಳಿಗೆಯವರಿಗೆ ಅನುಕೂಲ ಮಾಡಿಕೊಡಬೇಕಾಗುತ್ತದೆ. ಮದ್ದೂರು ಮಂಡ್ಯ, ಮಳವಳ್ಳಿಯ ಮೂರು ತಾಲ್ಲೂಕಿನ ಕೊನೆಯ ಭಾಗವೇನಿದೆ ಆ ಜನರಿಗೆ ನೀರನ್ನು ತಲುಪಿಸಲೇ ಬೇಕಾಗಿದೆ. ಇವತ್ತು ಕಬ್ಬಿಗೆ, ಭತ್ತಕ್ಕೆ ನೀರಿಲ್ಲದಿರುವುದನ್ನು ತಾವು ನೋಡುತ್ತಿದ್ದೀರಿ. ಸೋಮಶೇಖರ್‌ರವರ ಕ್ಷೇತ್ರದಲ್ಲಿ ಬಿಜಿಪುರ ಎಕ್ಸಟೆನ್‌ಷನ್ ನಾಲೆಯೆಂದು ತಲಕಾಡಿನವರೆಗೆ ಮುಟ್ಟಿದ್ದೇವೆ. ಇವೆಲ್ಲದರ ಬಗ್ಗೆ ಸಮಗ್ರವಾಗಿ ಆಲೋಚನೆ ಮಾಡಿಕೊಂಡೆ 1997 ನೇ ಜನವರಿಯಲ್ಲಿ ನಾಲೆಯನ್ನು ಬಂದ್ ಮಾಡತಕ್ಕದ್ದು ಏಚಿತ; 1997 ರ ಜೂನ್‌ಗೆ ಟನಲ್ ಕೆಲಸವಿರಲಿ, ಲೈನಿಂಗ್ ಕೆಲಸವಿರಲಿ, ವಿತರಣೆಯ ಕೆಲಸವಿರಲಿ, ಆಕ್ವೆಡೆಕ್ಟ್‌ನ ಕೆಲಸವಿರಲಿ ಎಂಡ್ ಕನೆಕ್ಷನ್ ಕೆಲಸವಿರಲಿ ಪ್ರತಿಯೊಂದು ಸಂಬಂಧಪಟ್ಟ ಕೆಲಸವನ್ನು ಪೂರ್ಣ ಮಾಡುತ್ತೇವೆ. 1997 ರ ಜೂನ್‌ಗೆ ಹೊಸ ನೀರನ್ನು ಕೊಡುತ್ತೇವೆ. ಸಮಯವನ್ನು ಕಡಿಮೆ ಮಾಡುವ ಬಗ್ಗೆ ಎಲ್ಲಾ ಪರಿಣಿತರನ್ನು, ಜನ ಪ್ರತಿನಿಧಿಗಳನ್ನು ಮತ್ತು ಪುಟ್ಟಣ್ಣಯ್ಯನವರನ್ನು ಕರೆಸಿ ಚರ್ಚೆ ಮಾಡುತ್ತೇನೆ. ಪುಟ್ಟಣ್ಣಯ್ಯನವರು ಕರೆದಲ್ಲಿಗೇ ಹೋಗಿ ಇದೆಲ್ಲಾ ವಿಷಯವನ್ನು ಅವರ ಮುಂದಿಡುತ್ತೇನೆ. ಆದರೆ ಕೆ.ಆರ್.ಎಸ್.ನ ನೀರಾವರಿ ಸಂಪರ್ಕ ಸಮಿತಿಯವರೇನು ಸಲಹೆಯನ್ನು ಕೊಟ್ಟಿದ್ದಾರೆ ಅದನ್ನು ಬದಲಾವಣೆ ಮಾಡುವುದಿಲ್ಲ. 1997 ನೇ ಜನವರಿಯಿಂದ ನಾಲೆಯಲ್ಲಿ ನೀರನ್ನು ನಿಲ್ಲಿಸಿ, 1997 ನೇ ಜೂನ್‌ಗೆ ಕೆಲಸವನ್ನು ಮುಗಿಸುತ್ತೇವೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಉಪಾಧ್ಯಕ್ಷರೇ, ನಾನೂ ನೀರಾವರಿ ಸಲಹಾ ಸಮಿತಿಯಲ್ಲಿ ಇದ್ದವನು. ಕೆಲಸವನ್ನು ಮಾಡಬಾರದೆಂದು ನಾನು ಹೇಳುತ್ತಿಲ್ಲ. ಐದುನೂರು ಕೋಟಿಯವರೆಗೆ ಬೆಳೆ ನಾಶವಾಗುತ್ತದೆ. ಏಕೆಂದರೆ ಭದ್ರಾದಲ್ಲಿ ಇದೇ ರೀತಿಯಾಯಿತು. ಭದ್ರಾ ಡ್ಯಾಂನ ನೀರನ್ನೆಲ್ಲಾ ಖಾಲಿ ಮಾಡಿ ಸುಮಾರು ಎರಡೂವರೆ ಎಕರೆ ಅಡಿಕೆ, ತೆಂಗಿನ ತೋಟವೆಲ್ಲಾ ನಾಶವಾಗತಕ್ಕ ಪರಿಸ್ಥಿತಿ ಬಂತು. ಇಡೀ ಡ್ಯಾಂನ ನೀರನ್ನು ಖಾಲಿ ಮಾಡಿ ಆನಂತರ ಆಚ್ಚುಕಟ್ಟನ್ನು ಸರಿಮಾಡಬೇಕೆಂದು ಬಾಂಬೆ ಇಂಜಿನಿಯರಿಂಗ್ ಕನ್‌ಸಲ್ಟೇಷನ್ಸ್ ಸಲಹೆಯನ್ನು ಕೊಟ್ಟಿದ್ದರು. ಕೊನೆಗೆ ಕರ್ನಾಟಕ ಇಂಜಿನಿಯರ್‌ಗಳು ನಾವೇ ಆ ಕೆಲಸವನ್ನು ಮಾಡುತ್ತೇವೆಂದು ಕೇವಲ ಐವತ್ತು ಲಕ್ಷ ರೂಪಾಯಿಗಳಲ್ಲಿ ಭದ್ರಾದಲ್ಲಿ ಅಣೆಕಟ್ಟನ್ನು ಮಾಡಿ ಸೋರುತ್ತಿದ್ದ ನೀರನ್ನು ನಿಲ್ಲಿಸಿ ಆ ವರ್ಷ ನಾಶವಾಗುತ್ತಿದ್ದ ಎರಡೂವರೆ ಲಕ್ಷ ಎಕರೆ ಬೆಳೆಯನ್ನು ತಪ್ಪಿಸಿದ್ದಾರೆ. ಹಿಂದಿನ ಮುಖ್ಯಮಂತ್ರಿಯವರು ಸ್ಥಳ ಪರಿಶೀಲನೆ ಮಾಡಿ ಎಲ್ಲರನ್ನೂ ಕರೆದು ಸಭೆ ಮಾಡಿ ಸೂಕ್ತವಾದ ನಿರ್ಧಾರಕ್ಕೆ ಬರೋಣ ವೆನ್ನತಕ್ಕ ಮಾತನ್ನು ಹೇಳಿದ್ದರು.

ಶ್ರೀ ಎಸ್. ಕೃಷ್ಣಪ್ಪ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ದೇವೇಗೌಡರು ಈ ವರ್ಷ ಈ ಕೆಲಸ ಬೇಡ ಮುಂದಿನ ವರ್ಷ ತೆಗೆದುಕೊಳ್ಳಿ ಎಂದು ಮಾತ್ರ ಹೇಳಿದ್ದುದು.

(ಗೊಂದಲ)

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಮಾನ್ಯ ಮುಖ್ಯಮಂತ್ರಿಗಳು ನಿಜ ಹೇಳಿದ್ದಾರೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಆಧರೆ ಸ್ಥಳವನ್ನು ಪರಿಶೀಲನೆ ಮಾಡುತ್ತೇನೆ ಎಂಬ ಒಂದು ಮಾತು ಹೇಳಿದ್ದರು. ಆದುದರಿಂದ ಮಾನ್ಯ ನೀರಾವರಿ ಮಂತ್ರಿಗಳು ಸ್ಥಳವನ್ನು

ಪರಿಶೀಲನೆ ಮಾಡಿ ಎಲ್ಲಾ ಸಂಘ ಸಂಸ್ಥೆಗಳವರನ್ನು ಮತ್ತು ನಮ್ಮನ್ನು ಕರೆಯಿಸಿ ಕನ್‌ವಿನ್ಸ್ ಮಾಡಿ ಎಂದು ನಾನು ಹೇಳುತ್ತಿದ್ದೇನೆ.

+**ಶ್ರೀ ಕೆ. ಎನ್. ನಾಗೇಗೌಡ** :- ಮಾನ್ಯ ಪುಟ್ಟಣ್ಣಯ್ಯನವರು ಬಹಳ ತಿಳುವಳಿಕೆ ಉಳ್ಳವರು. ನಾನು ವಿಂಡಿತವಾಗಿಯೂ ಅವರನ್ನು ಕರೆದು ಕೇಳುತ್ತೇನೆ, ಟಿಕ್ನಿಕಲ್ ಎಕ್ಸ್‌ಪರ್ಟ್ ಎಷ್ಟು ಜನರನ್ನು ಬೇಕಾದರೂ ಕೇಳೋಣ. ಎಲ್. ಅಂಡ್ ಟಿ. ಯವರನ್ನು ಕೇಳೋಣ. ಶ್ರೀ ಕೆ. ಸಿ. ರೆಡ್ಡಿಯವರು ನಮ್ಮ ರಾಜ್ಯದ ಟಿಕ್ನಿಕಲ್ ಬೋರ್ಡ್ ಛೇರ್ಮನ್ ಆಗಿದ್ದಾರೆ, ಮೊನ್ನೆ ನಾನು, ಮಾನ್ಯ ಚೌಡಯ್ಯನವರು ಮತ್ತು ಅವರು ಸುಮಾರು ಒಂದು ಗಂಟೆಗಳ ಕಾಲ ಚರ್ಚೆ ಮಾಡಿದ್ದೇವೆ. ನಿಮ್ಮನ್ನೂ ಕರೆಯಿಸಿ ಮಾತನಾಡುತ್ತೇನೆ. ಆದರೆ ತೀರ್ಮಾನ ವೇನು ಮಾಡಿದ್ದಾರೆ, ಆ ತೀರ್ಮಾನವನ್ನು ಇವತ್ತು ಬದಲಾಯಿಸುವುದಕ್ಕೆ ಸಾಧ್ಯವಿಲ್ಲ. ಜನವರಿ 1997 ರಿಂದ ನೀರು ನಿಲ್ಲಿಸಬೇಕಾಗುತ್ತದೆ. ಎಷ್ಟು ದಿವಸ ಶಾರ್ಟೇಜ್ ಕಡಿಮೆ ಮಾಡಬಹುದು, how many days we can reduce in the duration of closure ಎಂಬುದನ್ನು ನೋಡೋಣ. ಭದ್ರಾ ಮತ್ತು ತುಂಗಾ ವಿಷಯವನ್ನು ಕುರಿತು ಅವರು ಹೇಳಿದರು. ಭದ್ರಾದಲ್ಲಿ ಮತ್ತು ತುಂಗಾದಲ್ಲಿ ನಾನು ಎರಡೂ ಸ್ಪಡಿ ಮಾಡಿ ನೋಡಿದ್ದೇನೆ. ಭದ್ರಾದಲ್ಲಿ, ತುಂಗಾದಲ್ಲಿ ಅವರು ಸರಿಯಾಗಿ ಪ್ರಿ-ಪ್ಲಾನ್ ಮಾಡಿರಲಿಲ್ಲ ಅವರಲ್ಲಿ ನೀರು ನಿಲ್ಲಿಸುವುದರಲ್ಲಿ ಜಿಜ್ಞಾಸೆ ಇತ್ತು. ತುಂಗಾದಲ್ಲಿ 20 ದಿವಸ ನೀರು ಕೊಡದೇ ಹೋಗಿದ್ದರೆ, ಹೋದ ವರ್ಷ 1995 ರಲ್ಲಿ ಕ್ಲೋಸರ್ ಪಿರಿಯಡ್ ಮಾಡದೇ ಹೋಗಿದ್ದರೆ, ಇಷ್ಟು ಹೊತ್ತಿಗೆ ನಾವು ನೀರು ಕೊಡುತ್ತಿದ್ದೇವು. ಆ ನೀರನ್ನು ಕೊಡುವುದರಲ್ಲಿ ಜಿಜ್ಞಾಸೆ ಇದ್ದುದರಿಂದ ಅದು ಮುಂದಕ್ಕೆ ಹೋಯಿತು. ಆದರೆ ಈಗ ನಮಗೆ ಇನ್ನೂ ಐದು ಆರು ತಿಂಗಳು ಇದೆ. ಐದು ತಿಂಗಳಲ್ಲಿ ಮಾಡುವಂತಹ ಎಲ್ಲಾ ಪ್ಲಾನ್ಸ್ ಇದೆ, ನಾನು ಮಾಡಿ ಕೊಡುತ್ತೇನೆ. ನಾನು ಅವರಿಗೆ ಪೂರ್ತಿಯಾಗಿ ಕನ್‌ವಿನ್ಸ್ ಮಾಡುತ್ತೇನೆ. ಇನ್ನೂ ಐದು ತಿಂಗಳು ಕಾಲ ಇದೆ, ಆದರಲ್ಲಿ ಎಲ್ಲಾ ಇನ್‌ಫ್ರಾಸ್ಟ್ರಕ್ಚರ್ ಅನ್ನು ಮಾಡಿ, ಎಲ್ಲಾ ರೀತಿಯ ನಮ್ಮ ವೀಕ್ಲಿ ಪ್ರೋಗ್ರಾಂ, ಮಂತ್ಲಿ ಪ್ರೋಗ್ರಾಂ, ಶೆಡ್ಯೂಲ್ ಪ್ರೋಗ್ರಾಮ್ಸ್, ಫೈನಾನ್ಷಿಯಲ್ ಮತ್ತು ಫಿಜಿಕಲ್ ಟಾರ್ಗೆಟ್ ಎಲ್ಲಾ ಟೇಬಲ್ ಮಾಡಿ ನಾನು ಕೊಟ್ಟಿದ್ದೇನೆ. ಆದರಲ್ಲಿ ಯಾವುದೇ ಆದಂತಹ ಅನುಮಾನ ಇಲ್ಲ. ಇದನ್ನು ಕಂಪ್ಲೀಟ್ ಮಾಡತಕ್ಕಂತಹ ಪೂರ್ಣ ವಿಶ್ವಾಸ ನಮಗಿದೆ. ನಮ್ಮ ಟಿಕ್ನಿಕಲ್ ಎಕ್ಸ್‌ಪರ್ಟ್ಸ್‌ಗೂ ಇದೆ. ಅವರಿಗೂ ನಾನು ಕನ್‌ವಿನ್ಸ್ ಮಾಡುತ್ತೇನೆ. ನಾನು ಅವರ ರೂಮಿಗೆ ಹೋಗಿ, ಇವತ್ತು ಅಥವಾ ನಾಳೆ ಕುಳಿತು, ಎಲ್ಲಾ ಪ್ಲಾನ್ ಮತ್ತು ಸ್ಕೆಚ್‌ಗಳನ್ನು ಅವರಿಗೆ ತೋರಿಸಿ, ಮಾನ್ಯ ಸದಸ್ಯರನ್ನೂ ನಾಲೆಗೆ ಕರೆದುಕೊಂಡು ಹೋಗಿ ಅಲ್ಲಿನ ಕಾರ್ಯ ತೋರಿಸಿ, ಅವರನ್ನು ಕನ್‌ವಿನ್ಸ್ ಮಾಡುತ್ತೇನೆ. ನನಗೆ ಆ ವಿಶ್ವಾಸ ಇದೆ. ದಯವಿಟ್ಟು ಮಾನ್ಯ ಸದಸ್ಯರು ಅದನ್ನು ಒಪ್ಪಿಕೊಳ್ಳಲಿ. ಜನವರಿಯಿಂದ ನೀರು ನಿಲ್ಲಿಸುತ್ತೇವೆ ಎಂದು ತಿಳಿಸುತ್ತೇನೆ.

(ಅ) ದಕ್ಷಿಣ ಕನ್ನಡ ಜಿಲ್ಲೆಯ ವಾಮಂಜೂರಿನಲ್ಲಿ ಒಂದೇ ಕುಟುಂಬದ ನಾಲ್ವರ ಅಮಾನುಷರಾಗಿ ಹತ್ಯೆ.

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) :- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ವಾಮಂಜೂರಿನಲ್ಲಿ ಎರಡು ವರ್ಷಗಳ ಹಿಂದೆ